17.	Hassan	8	17,39,128
18.	Kolar	12	26,08,692
19.	Kodagu	3	6,52,173
20.	Mandya	9	19,56,519
21.	Mysore	11	23,91,301
22.	Chamrajnagar	5	10,86,955
23.	Raichur	6	13,04,346
24.	Koppal	5	10,86,955
25.	Gulbarga	13	28,26,083
26.	Tumkur	13	28,26,083
27.	Uttara Kannada	6(T-11)	23,91,301
		Total 224	5,00,00.000

ಶಿವಮೊಗ್ಗ ಜಿಲ್ಲೆಯಲ್ಲಿನ ತಾಳೆ ಬೆಳೆಗಾರರಿಗೆ ಆಗುತ್ತಿರುವ ತೊಂದರೆ.

1532(2187) ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) :— ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಶಿವಮೊಗ್ಗ ಜಿಲ್ಲೆಯ ತಾಳೆ ಬೆಳೆಗಾರರು ಬೆಳೆದ ತಾಳೆಹಣ್ಣಿಗೆ ಬೆಂಬಲ ಸಿಗದೆ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಹಾಗಿದ್ದಲ್ಲಿ, ರೈತರು ಬೆಳೆದ ತಾಳೆ ಹಣ್ಣಿಗೆ ಬೆಂಬಲ ಬೆಲೆ ನೀಡಲು ಸರ್ಕಾರ ಯೋಚಿಸಿದೆಯೇ?

ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :—

1. ಶಿವಮೊಗ್ಗ ಜಿಲ್ಲೆಯ ರೈತರು ಬೆಳೆದ ತಾಳೆ ಹಣ್ಣಿಗೆ ಪ್ರತಿ ಟನ್ನಿಗೆ ರೂ. 3200-00 ರಂತೆ ಖರೀದಿ ದರ ನಿಗಧಿಪಡಿಸಿರುವುದು ದೇಶದಲ್ಲಿಯೇ ಅತ್ಯಂತ ಹೆಚ್ಚಿನ ದರವಾಗಿರುವುದರಿಂದ ಬೆಂಬಲ ಬೆಲೆ ನೀಡುವ ವಿಷಯ ಸರ್ಕಾರದ ಪರಿಶೀಲನೆಯಲಿಲ್ಲ.

2. ಇಲ್ಲ.

ರಾಜ್ಯ ರಸ್ತೆಸಾರಿಗೆ ಬಸ್ಸುಗಳಲ್ಲಿ ಪ್ರತಿದಿನ ಪ್ರಯಾಣ ಮಾಡುವವರಿಗೆ ರಿಯಾಯಿತಿ ದರದಲ್ಲಿ ಬಸ್ ಪಾಸ್.

1533(2191) ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.